**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 410/2024**

| | | |
|---|---|---|
| ಸಾಕ್ಷಿದಾರರ ಹೆಸರು | ಪ್ರಸನ್ನಕುಮಾರ್ | ಪ್ರಮಾಣ ಮಾಡಿದ ದಿನಾಂಕಃ 29.11.2025 |
| ತಂದೆ ಹೆಸರು | ಸಿದ್ದಪ್ಪ | |
| ವಯಸ್ಸು | 52 ವರ್ಷ | |
| ವೃತ್ತಿ | ಎ.ಎಸ್.ಐ | ಚಾಸಾ: 08 |
| ವಾಸಸ್ಥಳ | ಬೇಗೂರು | ಪ್ರಾಸಾ: 04 |

**ದಿನಾಂಕಃ 29.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ದಿಃ 01.08.2022 ರಿಂದ ಇಲ್ಲಿಯವರೆಗೂ ಬೇಗೂರು ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.08.2024 ರಂದು ನಾನು ಠಾಣಾ ಉಸ್ತುವಾರಿಯಲ್ಲಿ ಇರುವಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 124/2024 ಕಲಂ.427, 447 ರಡಿಯಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ದಿಃ 15.06.2024 ರಂದು ನಮ್ಮ ಜಮೀನಿನಲ್ಲಿ ಹಾಕಿದ್ದ ಸಿಮೆಂಟ್ ಕಂಬಗಳು ಮತ್ತು ಎರಡು ಕಬ್ಬಿಣದ ಗೇಟ್ ಗಳನ್ನು ಜೆಸಿಪಿ ಯಂತ್ರದಿಂದ ಜಖಂಗೊಳಿಸಿ ಕೆಡವಿರುತ್ತಾರೆ ಎಂದು ದೂರು ನೀಡಿರುತ್ತಾರೆ. ಅದೇ ದಿನ ನ್ಯಾಯಾಲಯಕ್ಕೆ ಮತ್ತು ತನಿಖಾಧಿಕಾರಿಗಳಿಗೆ ಪ್ರಥಮ ವರ್ತಮಾನ ವರದಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ದಿಃ 05.08.2024 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸ-4 ಮತ್ತು 5 ರವರಿಗೆ ನೋಟೀಸ್ ಜಾರಿ ಮಾಡಿ ಪಂಚರಾಗುವಂತೆ ಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡ ಮೇರೆಗೆ ಸದರಿ ಸ್ಥಳವನ್ನು ಚಾಸ-1 ಮತ್ತು 2 ರವರು ಸ್ಥಳ

ತೋರಿಸಿದ ಮೇರೆಗೆ ಸ್ಥಳ ಪರೀಶಿಲಿಸಿದಾಗ ಒಟ್ಟು 57 ಸಿಮೆಂಟ್ ಕಂಬಗಳು ಹಾಗೂ ಎರಡು ಕಬ್ಬಿಣದ ಗೇಟ್ ಗಳು ಜಖಂ ಆಗಿದ್ದು. ಸದರಿ ಸ್ಥಳ ಪರಿಶೀಲಿಸಿ ಬೆಳಿಗ್ಗೆ 11.00 ರಿಂದ 11.45 ರವರೆಗೆ ಮಹಜರ್ ಮಾಡಿರುತ್ತೇನೆ. ಆ ಕಾಲಕ್ಕೆ ಫೋಟೋಗಳನ್ನು ತೆಗೆದಿರುತ್ತೇನೆ.

ಅದೇ ದಿನ ಚಾಸ-2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 06.08.2024 ರಂದು ಸದರಿ ಜಮೀನಿಗೆ ಸಂಬಂಧಿಸಿದಂತೆ ಹದ್ದುಬಸ್ತು ಗುರುತಿಸಲು ಮಾನ್ಯ ತಹಶೀಲ್ದಾರ್ ಗುಂಡ್ಲುಪೇಟೆರವರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ ಹಾಗೂ ಚಾಸ-1 ರವರಿಗೆ ಉಂಟಾಗಿರುವ ನಷ್ಟದ ಮೌಲ್ಯದ ವರದಿ ಕೊಡುವಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ, ಗುಂಡ್ಲುಪೇಟೆ ರವರಿಗೆ ಮನವಿ ನೀಡಿರುತ್ತೇನೆ. ದಿಃ 12.08.2024 ರಂದು ಮಾನ್ಯ ತಹಶೀಲ್ದಾರ್ ರವರು ನನಗೆ ಪತ್ರ ವ್ಯವಹಾರ ಮಾಡಿದ್ದು, ಸದರಿ ವಿಷಯವು ಭೂ ದಾಖಲೆಗಳ ಸಹಾಯಕ ನಿರ್ದೇಶಕರವರು ಸರ್ವೇ ಇಲಾಖೆಯವರಿಗೆ ಬರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ. ದಿಃ 17.08.2024 ರಂದು ಚಾಸ-1 ರವರಿಗೆ ಆಗಿರುವ ನಷ್ಟವನ್ನು ಅಂದಾಜು ಮಾಡಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ, ಗುಂಡ್ಲುಪೇಟೆ ರವರಿಗೆ ಸ್ಥಳಕ್ಕೆ ಬಂದಿರುತ್ತಾರೆ. ಸ್ಥಳವನ್ನು ನಾನೇ ತೋರಿಸಿರುತ್ತೇನೆ. ದಿಃ 21.08.2024 ರಂದು ಸದರಿ ಇಂಜಿನಿಯರ್ ರವರು ಚಾಸ-1 ರವರಿಗೆ ಸದರಿ ಕೃತ್ಯದಿಂದ ರೂ.1,21,000/- ನಷ್ಟವಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. ದಿಃ 30.08.2024 ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರವರು ಸರ್ವೇ ನಂ.282 ರ ಜಮೀನಿಗೆ ಸಂಬಂಧಪಟ್ಟಂತೆ ನಮೂನೆ 1 ರಿಂದ 5 ನ್ನು ಭರ್ತಿ ಮಾಡಿ ಸಕ್ಷಮ ಪ್ರಾಧಿಕಾರದಿಂದ ಸಹಿ ಮಾಡಿಸಿ ಕೊಟ್ಟರೆ ದಾಖಲೆ ನೀಡುವುದಾಗಿ ಹೇಳಿರುತ್ತಾರೆ.

ದಿಃ 01.09.2024 ರಂದು ಈ ಕೇಸಿನ ಆರೋಪಿಯಾದ ನವನೀತ್ ರಾವ್ ರವರಿಗೆ ಕಲಂ.41(ಎ) ಸಿ.ಆರ್.ಪಿ.ಸಿ ಅಡಿ ನೋಟೀಸ್ ನೀಡಿ ದಸ್ತಗಿರಿ ಕ್ರಮ ಜರುಗಿಸಿ ಜಾಮೀನು ಪಡೆದು ಬಿಡುಗಡೆ ಮಾಡಿರುತ್ತೇನೆ. ದಿಃ 29.09.2024 ರಂದು ಈ ಪ್ರಕರಣದ ತನಿಖೆಯನ್ನು ಪೂರೈಸಿ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ5 ಎಂದು, ಸಾಕ್ಷಿಯ

ಸಹಿಯನ್ನು ನಿಪಿ5(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ನಿಪಿ1 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ3 ಮತ್ತು ನಿಪಿ4 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಇಂಜಿನಿಯರ್ ರವರು ನೀಡಿದ ವರದಿಯನ್ನು ನಿಪಿ6 ಎಂದು, ಸಾಕ್ಷಿಯ ಸಹಿಯನ್ನು ನಿಪಿ6(ಎ) ಎಂದು ಗುರ್ತಿಸಲಾಯಿತು. ಅಂದಾಜು ವೆಚ್ಚವನ್ನು ನಿಪಿ7 ಎಂದು, ಸಾಕ್ಷಿಯ ಸಹಿಯನ್ನು ನಿಪಿ7(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ಆರ್.ಟಿ.ಸಿ ಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ8 ಎಂದು ಗುರುತಿಸಲಾಯಿತು.

ಕಲಂ 65(ಬಿ) ಭಾರತೀಯ ಸಾಕ್ಷ್ಯ ಅದಿನಿಯಮ ಅಡಿಯಲ್ಲಿ ಪಡೆದ ಪ್ರಮಾಣ ಪತ್ರವನ್ನು ಚಾಸ-7 ರವರಿಂದ ಪಡೆದಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ9 ಎಂದು, ಸಾಕ್ಷಿಯ ಸಹಿಯನ್ನು ನಿಪಿ9(ಎ) ಎಂದು ಗುರ್ತಿಸಲಾಯಿತು. ಪಂಚನಾಮೆ ಕಾಲಕ್ಕೆ ಪಂಚರು ಸುಮಾರು ರೂ.1,50,000/- ನಷ್ಟವಾಗಿರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿ ಗೈರು ಹಾಜರಿದ್ದು ಗುರುತಿಸುವಿಕೆ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ**

ದೂರನ್ನು ಎಲ್ಲಿ ಟೈಪ್ ಮಾಡಿಸಲಾಯಿತು ಎಂದು ವಿಚಾರ ಮಾಡಿಲ್ಲ. ಚಾಸ-1 ರವರು ಹಲವಾರು ದೂರುಗಳನ್ನು ನಮ್ಮ ಠಾಣೆಯಲ್ಲಿ ದಾಖಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚರು ಘಟನಾ ಸ್ಥಳದಲ್ಲಿ ಇದ್ದರು ಅವರಿಗೆ ನೋಟೀಸ್ ಜಾರಿ ಮಾಡಿದ್ದೇನೆ. ಪಂಚರನ್ನು ಅಲ್ಲಿಗೆ ಯಾರು ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ನೋಡಿದಾಗ ಪಂಚರು ಘಟನಾ ಸ್ಥಳದಲ್ಲಿ ಇದ್ದರು. ಸ್ಥಳಕ್ಕೆ ಹೋದಾಗ ನಾನು ಆರ್.ಟಿ.ಸಿ ಯನ್ನು ನೋಡಿದ್ದೆ. ಸರ್ವೇ ನಂಃ 282/2 ರಲ್ಲಿ ಒಟ್ಟು 457 ಎಕರೆ ಜಮೀನು ಇದೆ. ಸರ್ವೇ ನಂಃ 282/2 ರಲ್ಲಿ ಚಾಸ-1 ರವರ ಜಮೀನು ದುರಸ್ತು ಆಗಿಲ್ಲ ಎಂದರೆ ಸರಿ. ಆರೋಪಿಯ ತಂದೆಯು ಸಹ

ಮಾಜಿ ಸೈನಿಕರು. ಸದರಿ ಸರ್ವೆ ನಂಬರ್ ನಲ್ಲಿ ಆರೋಪಿಗೂ ಸಹ 10 ಎಕರೆ ಜಮೀನು ಇದೆ ಎಂದರೆ ಸಾಕ್ಷಿ ಜಮೀನು ಇದೆ ವಿಸ್ತೀರ್ಣ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಗಡಿಯನ್ನು ಗುರುತಿಸದ ಹೊರತು ನಿಖರವಾಗಿ ಚಾಸ-1 ರವರ ಸ್ವತ್ತನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿ.

ನಿಪಿ3 ಮತ್ತು 4 ರ ಫೋಟೋಗಳಲ್ಲಿ 57 ಕಂಬಗಳು ಜಖಂಗೊಂಡ ಬಗ್ಗೆ ಚಹರೆ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಹಜರ್ ನಲ್ಲಿ ನಮೂದಿಸಿರುವುದಾಗಿ ನುಡಿಯುತ್ತಾರೆ. 57 ಕಂಬಗಳು ಜಖಂಗೊಂಡಿರದ ಕಾರಣ ಆ ಕುರಿತು ಫೋಟೋಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಎರಡು ಗೇಟ್ ಗಳು ಜಖಂಗೊಂಡಿಲ್ಲ ಎಂದರೆ ಸರಿಯಲ್ಲ. ಜಖಂಗೊಳಿಸಿದ ಜೆಸಿಪಿಯ ಚಾಲಕ ಮತ್ತು ಅದರ ಸಂಖ್ಯೆಯು ಬಗ್ಗೆ ತನಿಖೆ ಮಾಡಿದ್ದೀರಾ ಎಂದರೆ ಸಾಕ್ಷಿ ಆರೋಪಿಯನ್ನು ವಿಚಾರಿಸಲಾಗಿ ದಾರಿಯಲ್ಲಿ ಹೋಗುತ್ತಿದ್ದ ವ್ಯಕ್ತಿಯನ್ನು ಕರೆದು ಸದರಿ ಕೃತ್ಯ ಮಾಡಿರುವುದಾಗಿ ಹೇಳಿದರು ಎಂದು ನುಡಿಯುತ್ತಾರೆ. ಚಾಸ-1 ರಿಂದ 3 ರವರನ್ನು ವಿಚಾರಿಸಲಾಗಿ ಸದರಿ ಜೆಸಿಪಿಯ ಬಗ್ಗೆ ನನಗೆ ಮಾಹಿತಿ ಲಭ್ಯವಾಗಲಿಲ್ಲ. ನಾನು ಘಟನಾ ಸ್ಥಳದಲ್ಲಿ ನಾನು ಯಾವುದೆ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಪಂಚರ ಸಹಿ ಪಡೆದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ3 ಮತ್ತು 4 ರ ಫೋಟೋಗಳನ್ನು ಘಟನಾ ಸ್ಥಳದಲ್ಲಿ ಅದೇ ದಿನ ತೆಗೆದಿಲ್ಲ ಎಂದರೆ ಸರಿಯಲ್ಲ. ನಿಪಿ2 ರಿಂದ 4 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಚಾಸ-7 ರವರು ನಿಪಿ3 ಮತ್ತು 4 ರ ಫೋಟೋವನ್ನು ತೆಗೆದಿರುತ್ತಾರೆ. ನಿಪಿ3 ಮತ್ತು 4 ರ ಫೋಟೋಗಳ ಪ್ರಿಂಟ್ ನ್ನು ಸ್ಟೊಡೀಯೋದಲ್ಲಿ ಹಾಕಿಸಿದೇವು. ಯಾವ ಸ್ಟೊಡೀಯೋ ಮತ್ತು ಪ್ರಿಂಟ್ ನಲ್ಲಿ ಸದರಿ ಫೋಟೋಗಳನ್ನು ತೆಗೆಯಲಾಯಿತು ಎಂದು ನಮೂದು ಇಲ್ಲ ಎಂದರೆ ಸರಿ.

ದಿಃ 06.08.2024 ಸಹಾಯಕಾ ಕಾರ್ಯಪಾಲಕ ಅಭಿಯಂತರರು ಅವರಿಗೆ ಮೌಲ್ಯ ಮಾಪನ ಕೋರಿ ಮನವಿ ಪತ್ರ ಸಲ್ಲಿಸಿದ್ದು ಅದನ್ನು ಹಾಜರುಪಡಿಸಿದ್ದೇನೆ. ಸದರಿ ಅಭಿಯಂತರರು ಘಟನಾ ಸ್ಥಳಕ್ಕೆ ಹಾಜರಾದ ಬಗ್ಗೆ ಫೋಟೋವನ್ನು ಹಾಜರು ಮಾಡಿಲ್ಲ. ನಿಪಿ7 ನ್ನು ನಮ್ಮ ಕಛೇರಿಯಲ್ಲೆ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ3 ಮತ್ತು 4 ರಲ್ಲಿ ತೋರಿಸಿರುವ ಕಂಬಗಳು ಮಳೆ ಮತ್ತು ಗಾಳಿಯ ರಭಸಕ್ಕೆ ಬಿದ್ದು ಹೋಗಿವೆ ಎಂದರೆ ಸರಿಯಲ್ಲ.

ಜೆಸಿಪಿಯಿಂದ ಸದರಿ ಕೃತ್ಯ ಉಂಟಾಗಿದ್ದರೆ ಆ ಚಹರೆ ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕಷ್ಟು ಸಾಕ್ಷ್ಯದಾರಗಳು ಲಭ್ಯವಿಲ್ಲದಿದ್ದರು ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ